# ಹಸಿದ ಹೊಟ್ಟೆಗೆ ರುಚಿ ರುಚಿ ಊಟ, ತಿಂಡಿ

# ಅನ್ನಪೂರ್ಣೆಯರ ಸಾರ್ಥಕ ಬದುಕು

ಮಹಿಳೆಯರು ಹೊಟ್ಟೆ ಪಾಡಿಗಾಗಿ ಏನೆಲ್ಲಾ ಕೆಲಸಗಳನ್ನು ಮಾಡುತ್ತಾರೆ ಎಂದು ಕೇಳಿದ್ದೇವೆ. ಆದರೆ ನಮ್ಮ ವಿಜಯಪುರದಲ್ಲಿ ಮಿನಾಕ್ಷಿ ಚೌಕ್ ಹತ್ತಿರ ಮುಂಜಾನೆಯ ವೇಳೆಗೆ ಮೂರನಾಲ್ಕು ಮಹಿಳೆಯರು ಸೇರಿ ರುಚಿಕರವಾದ ಪದಾರ್ಥಗಳನ್ನು ಕಮ್ಮಿ ದರಗಳಲ್ಲಿ ತಯಾರಿಸುತ್ತಾರೆ. ದೆಳ್ಳಿಗೆ ಅದಷ್ಟು ಮಾಡಿಕೊಂಡು ಹಣಗಳಿಸಿಕೊಂಡು ಮತ್ತೆ ಮನೆಗೆ ಹಿಂದತಿರುಗುತ್ತಾರೆ. ತಮ್ಮ ಕುಟುಂಬವನ್ನು ಈ ಉದ್ಯೋಗದಿಂದಲೇ ಮುಂದೆ ಸಾಗಿಸುತ್ತಿದ್ದಾರೆ.

ವಿಜಯಪುರದಲ್ಲಿ ಮಿನಾಕ್ಷಿ ಚೌಕ್ ಹತ್ತಿರ ಬಡ ಮಹಿಳೆಯರು ಹಸಿದವರಿಗೆ ಊಟ ಹಾಕಿ ತಮ್ಮ ಬದುಕು ರೂಪಿಸಿಕೊಂಡಿದ್ದಾರೆ. ಅವರ ಬಡ ಕುಟುಂಬ ಮೂರು ನಾಲ್ಕು ಮಹಿಳೆಯರು ಸೇರಿಕೊಂಡು ಬೇರೆ ಬೇರೆ ತರಹದ ರುಚಿಕರವಾದ ತಿನಿಸುಗಳನ್ನು ಮಾಡುತ್ತಾರೆ. ಎಗ್ ರೈಸ್, ಚಹಾ, ದೋಸಾ ಇಡ್ಲಿ, ಹೀಗೆ ಹಲವಾರು





ಬಿಸಿ ಬಿಸಿ ತಿನುಸುಗಳು ಮಾಡುತ್ತಾರೆ. ಅಕ್ಕ ಪಕ್ಕದ ಕಾಲೇಜಿನ ವಿದ್ಯಾರ್ಥಿಗರು ಮುಂಜಾನೆ ವೇಳೆಗೆ ಕ್ಲಾಸ್ ಮುಗಿಸಿಕೊಂಡು ತಿಂಡಿ ತಿನ್ನಲು ಅಲ್ಲಿಯೇ ಬರುತ್ತಾರೆ. ವಿದ್ಯಾರ್ಥಿಗಳ ಮನೆಗಳು ಬಹಳಷ್ಟು ದೂರ ದೂರ ಮನೆಗಳು ಮತ್ತು ಹಾಸ್ಟೆಲ್‌ಗಳು ಇರುವುದರಿಂದ ಅವರಿಗೆ 10, 15 ನಿಮಿಷಗಳಷ್ಟೇ ಇರುವುದರಿಂದ ಅವರಿಗೆ ಈ ಊಟ ತಿಂಡಿ ಬಹಳಷ್ಟು ಉಪಯುಕ್ತವಾಗಿದೆ. ಅಲ್ಲಿನ ಮಹಿಳೆಯರು ಬಹಳಷ್ಟು ರುಚಿಕರವಾಗಿ ಪದಾರ್ಥಗಳು ತಯಾರಿಸುತ್ತಾರೆ. ವಿದ್ಯಾರ್ಥಿಗಳು ಅಷ್ಟೇ ಅಲ್ಲದೇ ಬಹಳಷ್ಟು ಜನರು ಬೇರೆ-ಬೇರೆ ಕೆಲಸಕ್ಕೆ ಹೋಗುವವರು ಕೂಡಾ ಅಲ್ಲಿಯೇ ಬೆಳ್ಳಿಗೆಯ ತಿಂಡಿ ತಿನ್ನಲು ಹೋಗುತ್ತಾರೆ. ಹೆಚ್ಚಿನ ಸಮಯದ ಬಿಡುವು ಇಲ್ಲದ ಎಲ್ಲರೂ ಇಲ್ಲಿಗೇ ಬರುತ್ತಾರೆ. ಹಾಗೇಯೇ

ಸುಷ್ಮಾ ಪವಾರ

ಯಾರಿಗೂ ತಡ ಮಾಡದೇ ಅವರಿಗೆ ಬೇಕಾದ ಬಿಸಿ ಬಿಸಿ ತಿನಿಸುಗಳು ಮಾಡಿಕೊಡುತ್ತಾರೆ. ಆ ಸ್ಥಳ ಕೂಡಾ ಅವರಿಗೆ ಬಹಳಷ್ಟು ಉಪಯುಕ್ತವಾಗಿದೆ. ಅಲ್ಲಿ ಮಾರುಕಟ್ಟೆ ಕಾಲೇಜು, ಹಲವಾರು ಕೋಚಿಂಗ್ ಕ್ಲಾಸ್‌ಗಳು ಸಮೀಪವಾಗುತ್ತವೆ. ಇದರಿಂದ ಜನಸಾಮಾನ್ಯರಿಗೆ ಬಹಳಷ್ಟು ಸಹಾಯಕವಾಗಿದ್ದು, ಆ ಮಹಿಳೆ ಯರಿಗೂ ಕೂಡಾ ಬಹಲಷ್ಟು ಲಾಭವಾಗಿದೆ.



## ಕುಟುಂಬ ನಿರ್ವಹಣೆ

ಈ ಉದ್ಯೋಗ್ಯ ನಮಗೆ ಬಹಳಷ್ಟು ಉಪಯುಕ್ತವಾಗಿದೆ. ಮತ್ತು ಇಲ್ಲ ಹೆಚ್ಚಾನೆಚ್ಚು ಎಲ್ಲ ಶಿಕ್ಷಣ ಕಲಿಯುವ ವಿದ್ಯಾರ್ಥಿನಿಗಳು ಮತ್ತು ಕೆಲಸಕ್ಕೆ ಹೋಗುವವರು ಮುಂಜಾನೆ ಉಪಹಾರ ಮಾಡಲು ಬರುತ್ತಾರೆ. ಎಷ್ಟೇ ಜಾಸ್ತಿ ಜನರು ಬಂದರೂ ಕೂಡಾ ನಾವು ಅವರಿಗೆ ಹಾಗೆಯೇ ಕಳಿಸುವುದಿಲ್ಲ. ಇದು ಜನರಿಗೆ ಸಹಾಯ ಮತ್ತು ನಮಗೆ ನಮ್ಮ ಕುಟುಂಬ ನಿರ್ವಹಣೆ ಸಹಾಯಕವಾಗಿದೆ.

– ಅಡುಗೆ ತಯಾರಿಸುವ ಮಹಿಳೆ

Scanned with CamScanner